# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.146/2022

C.W.15
P.W. 11

<u>ದಿನಾಂಕಃ 18-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ರಂಗನಾಥ್ |
| ತಂದೆಯ ಹೆಸರು | ಃ ರಂಗಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ | ಃ ಕೆಂಚಗಾನಹಳ್ಳಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಅಮಾನತ್ತು ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ನಿಪಿ-25 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-25(ಎ ) ಎಂದು ಗುರುತಿಸಲಾಯಿತು.

2. ಈಗ್ಗೆ ಒಂದು ವರೆ ವರ್ಷದ ಕೆಳಗಡೆ ಶಿರಾ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ರಕ್ತ ಸಂಗ್ರಹಿಸಿದ ಡಬ್ಬಿ , ಮೂಳೆ ಜಪ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಯು ಒಂದು ಬಿಳಿ ಬಟ್ಟೆ ಚೀಲದಲ್ಲಿ ಸೀಲ್ ಮಾಡಲಾಗಿರುವ ವಸ್ತುಗಳನ್ನು ತೋರಿಸಲಾಗಿ, ಸದರಿ ಬಿಳಿ ಬಟ್ಟೆ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ.ಅಭಿಯೋಜಕರು ತೆರೆದ ನ್ಯಾಯಾಲಯದಲ್ಲಿ ಸದರಿ ವಸ್ತುಗಳನ್ನು ತೆರೆದು ಸಾಕ್ಷಿಗೆ ತೋರಿಸಲು ನ್ಯಾಯಾಲಯದ ಅನುಮತಿಯನ್ನು ಕೋರಿದರು, ಆರೋಪಿಗಳು ಹಾಗೂ ಆರೋಪಿ ಪರ ವಕೀಲರು ಮತ್ತು ಸಾಕ್ಷಿಯ ಸಮಕ್ಷಮ ಸದರಿ ವಸ್ತುಗಳನ್ನು ತೆರೆಯಲು ನ್ಯಾಯಾಲಯವು ಅನುಮತಿಸಲಾಯಿತು.

3) Soil near grave burial site ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-8 ಎಂದು ಗುರುತಿಸಲಾಯಿತು . ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-8(ಎ) ಎಂದು ಗುರುತಿಸಲಾಯಿತು.

4)Soil from surrounding area of skeletal remains ಇರುವ ಡಬ್ಬಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-9 ಎಂದು ಗುರುತಿಸಲಾಯಿತು . ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-9(ಎ) ಎಂದು ಗುರುತಿಸಲಾಯಿತು.

5) Soft tissue remains with sodium chloride ಇರುವ ಡಬ್ಬಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-10 ಎಂದು ಗುರುತಿಸಲಾಯಿತು . ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-10(ಎ) ಎಂದು ಗುರುತಿಸಲಾಯಿತು.

6) Portion of dried bone ಇರುವ ಡಬ್ಬಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-11 ಎಂದು ಗುರುತಿಸಲಾಯಿತು . ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-11(ಎ) ಎಂದು ಗುರುತಿಸಲಾಯಿತು.

7) ಬಿಳಿಯ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಲಾದ Long bone ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-12 ಎಂದು ಗುರುತಿಸಲಾಯಿತು . ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-12(ಎ) ಎಂದು ಗುರುತಿಸಲಾಯಿತು.

8) ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಬೇಕಾಗುತ್ತದೆ ಎಂದು ಪೊಲೀಸರು ತಿಳಿಸಿರುತ್ತಾರೆ. ಪಂಚನಾಮೆಯ ಕಾಲದಲ್ಲಿ ನನ್ನ ಜೊತೆ ಮತ್ತೊಬ್ಬರು ಇದ್ದರು, ಆದರೆ ಅವರ ಹೆಸರು ನೆನಪಿಲ್ಲ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರ ಮಾಡಿದ ಪಂಚನಾಮೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

9) ದಿ 10-06-2022 ರಂದು ಸದರಿ ಪಂಚನಾಮೆ 5.30 ರಿಂದ 6.30 ರವರಿಗೆ ನಡೆಯಿತು ಅಂದರೆ ಸರಿ. ನನ್ನ ಜೊತೆ ಪಂಚನಾಮೆಯ ಸಮಯದಲ್ಲಿ ಇದ್ದವರ ಹೆಸರು ರಾಜು ಅಂದರೆ ಸರಿ .

<u>ಪಾಟೀ ಸವಾಲುಃ **1** ನೇ ಆರೋಪಿಯ ಪರ ಶ್ರೀಸಿಡಿಸಿ ವಕೀಲರಿಂದಃ</u>

10) ನಾನು ಪಂಚನಾಮೆಯ ಸಮಯದಲ್ಲಿ ಸುಮಾರು 5-6 ಸಹಿಗಳನ್ನು ಡಬ್ಬಿಯ ಮೇಲೆ ಮತ್ತು ಪುಸ್ತಕದಲ್ಲಿ ಸಹಿ ಮಾಡಿರುತ್ತೇನೆ. ಮು ಮಾ-8 ರಿಂದ 12 ನ್ನು ಡಬ್ಬಿಗಳಲ್ಲಿ ಯಾರುತುಂಬಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯ ಕಾಲದಲ್ಲಿ ತುಂಬಿದ ವಸ್ತುಗಳನ್ನು ನೋಡಿರುತ್ತೇನೆ. ನಾನು ಸಹಿ ಮಾಡಿದ

ಚೀಟಿಗಳಲ್ಲಿ ಮತ್ತು ಪುಸ್ತಕದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಗೆ ಆಗಿಂದ ಆಗ್ಗೆ ನಾನು ಹೋಗುತ್ತಿರುತ್ತೇನೆ.ನಾನು ಹೋದಾಗಲೆಲ್ಲಾ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿ.ನಾನು ಹೋದಾಗ ನನ್ನ ಜೊತೆ ಯಾರು ಇರುವುದಿಲ್ಲ. ನನ್ನ ಜೊತೆಯಲ್ಲಿ ಮಹಜರ್ ನಲ್ಲಿ ಭಾಗವಹಿಸಿದ ವ್ಯಕ್ತಿಯು ಸಹ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನಾನು ಯಾವುದೇ ಪಂಚನಾಮೆಗೂ ಭಾಗವಹಿಸಿರುವುದಿಲ್ಲ ಮತ್ತು ಸಹಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಪೊಲೀಸರ ಮೇಲಿನ ವಿಶ್ವಾಸದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು